# ಕರ್ನಾಟಕ ಸರ್ಕಾರ

ಸಂಖ್ಯೆ ಇಡಿ: 260 ಯೋಸಕ 2009

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:11-01-2012

## ಸುತ್ತೋಲೆ

| | |
|---|---|
| ವಿಷಯ:- | ದಾವೆ ಸಂಖ್ಯೆ: 26877ಗೆ ಸಂಬಂಧಿಸಿದಂತೆ ದಿನಾಂಕ: 10.01.2012 ರಂದು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯ ಆಧಾರ ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ |

1. ದಾವೆ ಸಂಖ್ಯೆ 26877ಕ್ಕೆ ಸಂಬಂಧಿಸಿದಂತೆ ದಿನಾಂಕ:10-01-2012ರಂದು ಕರ್ನಾಟಕ ಮಾನ್ಯ ಉಚ್ಛನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಿದ್ದು, ವಿಚಾರಣೆಯ ಆಧಾರ ಕೆಲವು ವಿಷಯಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುತ್ತದೆ.

2. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ಒದಗಿಸಿರುವ ಬಗ್ಗೆ ಈಗಿನ ಮಾಹಿತಿಯನ್ನು ನಾಲ್ಕು ದಿನಗಳಲ್ಲಿ ದೃಢೀಕೃತ ಪ್ರತಿ ಯನ್ನು ಉಪನಿರ್ದೇಶಕರಿಂದ ತರಿಸತಕ್ಕದ್ದು.

3. ಈ ಬಗ್ಗೆ ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಗಳಿಗೆ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ವಹಿಸುವ ಬಗ್ಗೆ ಹಾಗೂ ಮೇಲ್ವಿಚಾರಣೆ ಮಾಡುವ ಬಗ್ಗೆ ಮತ್ತು ಯಾವ ಲೆಕ್ಕಶೀರ್ಷಿಕೆಯಲ್ಲಿ ಈ ನಿರ್ವಹಣಾ ವೆಚ್ಚವನ್ನು ಭರಿಸಲಾಗುತ್ತಿದೆ ಎಂಬುದಕ್ಕೆ ಸ್ಪಷ್ಟ ನಿರ್ದೇಶನ ನೀಡತಕ್ಕದ್ದು.

4. ಮುಂಬರುವ ಎರಡು ಉಪ ನಿರ್ದೇಶಕರುಗಳ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟವಾಗಿ ನಿರ್ದೇಶನ ವನ್ನು ನೀಡಿ, ಹಿಮ್ಮಾಹಿತಿಯನ್ನು ಪಡೆಯತಕ್ಕದ್ದು.

5. ಯಾವ ಶಾಲೆಗಳಲ್ಲಿ ಶಾಶ್ವತ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ನಮೂನೆಯನ್ನು ಸಿದ್ದಪಡಿಸಿ, ಕಾರಣಗಳನ್ನು ಪಡೆಯತಕ್ಕದ್ದು.

6. ಇತ್ತೀಚಿನ ಪ್ರಗತಿಯನ್ನು ಲಿಖಿತ ರೂಪದಲ್ಲಿ ತರಿಸಿಕೊಂಡ ನಂತರ, ಪ್ರಗತಿ ಸಾಧಿಸದ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲೆ ಸೂಕ್ತ ನಿಯಮಗಳಡಿ ಕ್ರಮವಹಿಸತಕ್ಕದ್ದು.

7. ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿರುವ ಶಾಲೆಗಳಿಗೆ ತಪಾಸಣಾಧಿಕಾರಿಗಳು ಹೋದಾಗ ಈ ವಿಚಾರವನ್ನೇ ಪರಿಶೀಲಿಸಲು ಒಂದು ವಿವರ ವಾದ ನಮೂನೆಯನ್ನು ಸಿದ್ಧಪಡಿಸಿ, ಕಳುಹಿಸುವುದು.

8. ಭೇಟಿಯ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ.ಯವರನ್ನು ಭೇಟಿ ಮಾಡಿ, ಸಂಬಂಧಿಸಿದ ವರಿಗೆ ನಿರ್ವಹಣಾ ವೆಚ್ಚ ಬಳಕೆ ಬಗ್ಗೆ ಮಾರ್ಗದರ್ಶನ ನೀಡಲು ತಿಳಿಸುವುದು.

9. ವೀಡಿಯೋ ಕಾನ್ಫರೆನ್ಸ್ ಮೂಲಕವೂ ಇತ್ತೀಚಿನ ಸ್ಥಿತಿ ಹಾಗೂ ನಿರ್ವಹಣಾ ವೆಚ್ಚದ ಮಾರ್ಗದರ್ಶನವನ್ನು ನೀಡುವುದು.

10. ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯದ ಆದೇಶಗಳನ್ವಯದ ಆಧಾರ ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ಕಾಲಮಿತಿಯೊಳಗೆ ಒದಗಿಸುವುದು ಮತ್ತು ಸರಿಯಾಗಿ ನಿರ್ವಹಣೆ ಮಾಡುವ ಬಗ್ಗೆ ಶಿಕ್ಷಣ ವಾರ್ತೆಯಲ್ಲಿ ವಿಶೇಷ ಲೇಖನಗಳನ್ನು ಛಾಯಾಚಿತ್ರದೊಂದಿಗೆ ಪ್ರಕಟಿಸುವುದು.

11. ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ತುರ್ತಾಗಿ ಕಾಲಮಿತಿ ಯೊಳಗೆ ಒದಗಿಸುವ ಬಗ್ಗೆ, ಅವುಗಳಿಗೆ ನಿಗದಿಯಾದ ಅನುದಾನದ ಬಗ್ಗೆ ಮತ್ತು ಅವುಗಳ ನಿರ್ವಹಣೆ ಬಗ್ಗೆ ಆಂಗ್ಲ ಮತ್ತು ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡುವುದು ಹಾಗೂ ಬಾನುಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಜಿಂಗಲ್ಸ್ ಅನ್ನು ಸಿದ್ದಪಡಿಸಿ ನೀಡುವುದು.

12. ಈಗಾಗಲೇ ರಚಿತವಾಗಿರುವ ತಜ್ಞರ ಸಮಿತಿ ಸಭೆಯನ್ನು ಹದಿನೈದು ದಿನಗಳಿಗೊಮ್ಮೆ ಕರೆದು ಪ್ರಗತಿ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

13. ಪುನ: ಈ ವಿಷಯವು ಮಾರ್ಚ್ ಮೊದಲನೆ ವಾರದಲ್ಲಿ ಮಾನ್ಯ ಉಚ್ಛನ್ಯಾಯಾಲಯ ದಲ್ಲಿ ವಿಚಾರಣೆಗೆ ಬರುವ ಹಿನ್ನಲೆಯಲ್ಲಿ ಸರ್ಕಾರವು ನ್ಯಾಯಾಲಯಕ್ಕೆ ನೀಡಿರುವ ಭರವಸೆಯನ್ನು ಈಡೇರಿಸಲು ಮೇಲ್ಕಂಡ ಎಲ್ಲಾ ಕ್ರಮಗಳನ್ನೂ ಅತ್ಯಂತ ಆದ್ಯತೆ ಮೇರೆಗೆ ಚಾಚೂ ತಪ್ಪದೇ ತೆಗೆದುಕೊಳ್ಳುವಂತೆ ಸೂಚಿಸಿದೆ.

13/1/12.

(ಜಿ. ಕುಮಾರ ನಾಯಕ)
ಸರ್ಕಾರದ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಗೆ:-

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
4. ನಿರ್ದೇಶಕರು[ಪ್ರಾಥಮಿಕ ಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು[ಪ್ರೌಢಶಿಕ್ಷಣ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ, ಬೆಂಗಳೂರು.
7. ಜಂಟಿ ನಿರ್ದೇಶಕರು[ಆಡಳಿತ], ಸರ್ವ ಶಿಕ್ಷಾ ಅಭಿಯಾನ, ಬೆಂಗಳೂರು.
8. ಉಪನಿರ್ದೇಶಕರು[ಯೋಜನೆ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ[ಆಯುಕ್ತರ ಮೂಲಕ]
10. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ[ಆಯುಕ್ತರ ಮೂಲಕ]
11. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಕಾರ್ಯದರ್ಶಿಗಳು[ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ], ಶಿಕ್ಷಣ ಇಲಾಖೆ, ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
13. ಸಂಯೋಜಕರು, ಶಿಕ್ಷಣ ಇಲಾಖೆ ಇ-ಆಡಳಿತ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಶಾಖಾ ರಕ್ಷಾ ಕಡತ,/ಹೆಚ್ಚುವರಿ ಪ್ರತಿಗಳು